ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 18- 20
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಪರಿವಾರ ನಾಯಕ ಸಮುದಾಯದ ಸಾಂಪ್ರದಾಯಿಕ ನ್ಯಾಯಪದ್ಧತಿ

**ರಮೇಶ ಬಿ***

*ಸಂಶೋಧಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***

*ಯಾವುದೇ ಒಂದು ಸಮುದಾಯದ ಸಾಮಾಜಿಕ ನಿಯಂತ್ರಣದ ಅನೌಪಚಾರಿಕ ಸಾಧನೆಗಳಲ್ಲಿ ಕುಲ ಪಂಚಾಯಿತಿ ಪ್ರಮುಖವಾದುದು. ಕುಲಪಂಚಾಯಿತಿಯು ಸಾಂಪ್ರದಾಯಿಕ ನ್ಯಾಯಪದ್ಧತಿಯಾಗಿದ್ದು, ಪ್ರಾಚೀನ ಬುಡಕಟ್ಟು ಮತ್ತು ಗ್ರಾಮೀಣ ಸಮುದಾಯಗಳಲ್ಲಿ ಯಾವುದೇ ಸಮಸ್ಯೆ ಅಥವ ಕಲಹಗಳು ಏರ್ಪಟ್ಟಾಗ ತಮ್ಮ-ತಮ್ಮಲ್ಲೆ ಸಮುದಾಯದ ಮುಖ್ಯಸ್ಥನ ನೇತೃತ್ವದಲ್ಲಿ ಬಗೆಹರಿಸಿಕೊಳ್ಳಲಾಗುತಿತ್ತು. ಒಂದು ವೇಳೆ ಆಪಾದಿತ ವ್ಯಕ್ತಿ ಕುಲ-ಪಂಚಾಯಿತಿ ತೆಗೆದುಕೊಂಡ ತೀರ್ಮಾನಕ್ಕ ಬದ್ಧನಾಗಿರದಿದ್ದರೆ ವಿವಿಧ ತೆರೆನಾದ ದಂಡವನ್ನು ವಿಧಿಸಲಾಗುತಿತ್ತು. ಪ್ರಸ್ತುತ ಲೇಖನದಲ್ಲಿ ಪರಿವಾರ ನಾಯಕ ಸಮುದಾಯದ ಸಾಂಪ್ರದಾಯಿಕ ನ್ಯಾಯಪದ್ಧತಿಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿವರಿಸಲಾಗಿದೆ.*

***Keywords:*** *ಸಾಂಪ್ರದಾಯಿಕ ನ್ಯಾಯ, ಕುಲಪಂಚಾಯಿತಿ, ಪರಿವಾರ ನಾಯಕ.*

## ಪೀಠಿಕೆ

ಪ್ರಾಚೀನ ಬುಡಕಟ್ಟು ಮತ್ತು ಗ್ರಾಮೀಣ ಸಮುದಾಯಗಳು ಇಂದಿಗೂ ಕೂಡ ತನ್ನದೇಯಾದ ಒಳಾಡಳಿತ ವ್ಯವಸ್ಥೆಯನ್ನು ಹೊಂದಿವೆ. ಸಾಮಾನ್ಯವಾಗಿ ಗ್ರಾಮೀಣ ಸಮಾಜದ ಸಾಂಪ್ರದಾಯಿಕ ನ್ಯಾಯಪದ್ಧತಿಯನ್ನು ಅವಲೋಕಿಸಿದಾಗ ಒಂದೊಂದು ಸಮುದಾಯದವರು ಅಥವ ಜಾತಿಯವರು ನ್ಯಾಯಧಾನದಲ್ಲಿ ಅವರದೇ ವಿಧಾನಗಳನ್ನು ಹೊಂದಿರುತ್ತಾರೆ. ನ್ಯಾಯದ ಧ್ಯೇಯೋದ್ದೇಶಗಳನ್ನು ಸಾಧಿಸಲು ಮತ್ತು ಜನಜೀವನದಲ್ಲಿ ಸುವ್ಯವಸ್ಥೆಯನ್ನುಂಟು ಮಾಡಲು ನ್ಯಾಯ ಪಂಚಾಯಿತಿಯು ಸಾಮಾಜಿಕ ನಿಯಂತ್ರಣದ ಅನೌಪಚಾರಿಕ ಸಾಧನವಾಗಿದೆ. ಒಂದು ಜನಸಮುದಾಯದ ನಂಬಿಕೆ, ಆಚರಣೆ, ಆದರ್ಶ ಮೌಲ್ಯಗಳು ನ್ಯಾಯ ನಿರ್ಣಯಗಳು ಪದ್ಧತಿಗಳನ್ನು ರೂಪಿಸುತ್ತದೆ.

## ಪರಿವಾರ ನಾಯಕ ಸಮುದಾಯದ ಕುಲ ಪಂಚಾಯಿತಿ

ಮೈಸೂರು ಜಿಲ್ಲೆಯ ಪರಿವಾರ ನಾಯಕ ಸಮುದಾಯದ ಜನರು ತಮ್ಮದೇ ಆದ ನೀತಿ-ನಿಯಮಗಳು, ನಂಬಿಕೆ-ನಿಷೇಧಗಳನ್ನು ಹೊಂದಿದ್ದು, ತಮ್ಮ ಪೂರ್ವಿಕರ ಕಾಲದಿಂದಲೂ ಸಾಂಪ್ರದಾಯಿಕ ನ್ಯಾಯಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಪರಿವಾರ ನಾಯಕ ಸಮುದಾಯದವರು ತಮ್ಮ ಸಮುದಾಯಕ್ಕೆ ಸಂಬಂಧಿಸಿದ ದೇವಸ್ಥಾನದಲ್ಲಿ ನ್ಯಾಯ ತೀರ್ಮಾನ ಮಾಡುತ್ತಾರೆ. ಇವರು ನ್ಯಾಯ ಮಾಡುವ ಸ್ಥಳವನ್ನು ನ್ಯಾಯದ ಗುಡಿಕಟ್ಟೆ ಅಥವ ಪಂಚಾಯಿತಿಕಟ್ಟೆ ಎಂದು ಕರೆಯುತ್ತಾರೆ. ಇಂತಹ ಹಲವಾರು ಗುಡಿಕಟ್ಟೆಗಳು ಸೇರಿ ಕಟ್ಟೆಮನೆ ಇರುತ್ತದೆ. ಸಾಮಾನ್ಯವಾಗಿ ಸಮುದಾಯದೊಳಗೆ ಏರ್ಪಡುವ ಕಲಹ-ಜಗಳ-ವಿವಾಧಗಳನ್ನು ಆಯಾಯ ಗ್ರಾಮದ ಮುಖಂಡನ

***Please cite this article as***: ರಮೇಶ್. ಬಿ. (2022). ಪರಿವಾರ ನಾಯಕ ಸಮುದಾಯದ ಸಾಂಪ್ರದಾಯಿಕ ನ್ಯಾಯಪದ್ಧತಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 1(3), 18–20.

ನೇತೃತ್ವದಲ್ಲಿ ಬಗೆಹರಿಸಿಕೊಳ್ಳಲಾಗುತ್ತದೆ. ಒಂದು ವೇಳೆ ಅಲ್ಲಿ ಬಗೆಹರಿಯದ ವ್ಯಾಜ್ಯಗಳು ಹಾಗೂ ಗಂಭೀರವಾದಂತಹ ಅಪರಾಧಗಳನ್ನು ಗಡಿ ಯಜಮಾನರುಗಳ ಬಗೆಹರಿಸುತ್ತಾರೆ. 8 ರಿಂದ 10 ಹಳ್ಳಿಗಳಿಗೆ ಒಂದು ಗಡಿಯಿರುತ್ತದೆ. ಗಡಿ ನ್ಯಾಯದಲ್ಲಿ ಎಲ್ಲಾ ಗ್ರಾಮಗಳ ಯಜಮಾನರುಗಳ ಜೊತೆಗೆ ಒಬ್ಬ ಗಡಿ ಯಜಮಾನನಿರುತ್ತಾನೆ. ಗಡಿನ್ಯಾಯದಲ್ಲಿ ತೆಗೆದುಕೊಂಡ ತೀರ್ಮಾನವನ್ನು ಸುಲಭವಾಗಿ ಧಿಕ್ಕರಿಸುವುದಿಲ್ಲ. ಒಂದು ವೇಳೆ ಗಡಿನ್ಯಾಯದಲ್ಲಿ ತೆಗೆದುಕೊಂಡ ತೀರ್ಮಾನಕ್ಕೆ ಬದ್ಧನಾಗಿರದಿದ್ದರೆ ಸಮುದಾಯದಿಂದ ಕೆಲಕಾಲ ಹೊರಗಿಡುತ್ತಾರೆ. ಹಿಂದೆ ಸಮಾಜದಿಂದ ಬಹಿಷ್ಕಾರ ಕೂಡ ಹಾಕಲಾಗುತ್ತಿತ್ತು.

**ಕುಲ ಪಂಚಾಯತಿಯಲ್ಲಿ ತೀರ್ಮಾನವಾಗುವ ಅಪರಾಧಗಳು**

ಪರಿವಾರ ನಾಯಕ ಸಮುದಾಯವು ಮೊದಲೇ ಹೇಳಿದಂತೆ ತನ್ನದೇಯಾದ ನೀತಿ–ನಿಯಮ, ಕಟ್ಟುಪಾಡುಗಗಳನ್ನು ಹೊಂದಿದ್ದು ಅವುಗಳನ್ನು ಚಾಚೂ ತಪ್ಪದೆ ಪಾಲಿಸಿಕೊಂಡು ಬರುತ್ತಿದ್ದಾರೆ. ಅವರ ಕಟ್ಟುಪಾಡುಗಳಿಗೆ ಯಾರಾದರೂ ವಿರುದ್ಧವಾಗಿ ನಡೆದುಕೊಂಡರೇ ಅದನ್ನು ಅಪರಾಧವೆಂದು ಬಗೆದು ಅಂಥವರಿಗೆ ಶಿಕ್ಷೆ ವಿಧಿಸಲಾಗುವುದು.

**ಪರಿವಾರ ನಾಯಕ ಸಮುದಾಯದ ಕಟ್ಟುಪಾಡುಗಳು**

- ಸಾಂಪ್ರದಾಯಿಕ ಹಬ್ಬ–ಜಾತ್ರೆ–ಉತ್ಸವದ ಆಚರಣೆಗಳ ಸಂದರ್ಭದಲ್ಲಿ ತಮ್ಮ ಕುಲದೇವರು ಮತ್ತು ಗ್ರಾಮದೇವತೆಗೆ ಕುರಿ–ಕೋಳಿ, ಮೇಕೆ, ಕಾಣಿಕೆಗಳನ್ನು ಅರ್ಪಿಸುವುದು.
- ಕೆಳಜಾತಿಯ ಮನೆಯಲ್ಲಿ ಊಟ ಮಾಡುವುದು ಅಪರಾಧ.
- ಹೆಂಡ ಕುಡಿದು ದೇವಸ್ಥಾನ ಗುಡಿಗೆ ಪ್ರವೇಶಿಸುವಂತಿಲ್ಲ.
- ಕುಲ ಪಂಚಾಯಿತಿ ಒಪ್ಪಿಗೆಯಿಲ್ಲದೆ ಮದುವೆಯಾದರೇ ದಂಡ ವಿಧಿಸುವುದು.
- ವಿಧವೆಯ ಜೊತೆ ಅನೈತಿಕ ಸಂಬಂಧ ಹೊಂದುವಂತಿಲ್ಲ.
- ಕೆಳಜಾತಿ ಮಹಿಳೆ ಹಾಗೂ ಪುರುಷರ ವಿವಾಹ ನಿಷೇಧ
- ಚಪ್ಪಲಿಯಿಂದ ಹೊಡೆದಾಡಿದರೆ ಜೈಲಿಗೆ ಹೋಗಿ ಬಂದರೆ ಮೈಲಿಗೆ ಎಂದು ಬಗೆಯುತ್ತಾರೆ.
- ಯಾವುದೇ ವ್ಯಾಜ್ಯವನ್ನು ಸಮುದಾಯದಕ ಟ್ಟೆಮನೆಯಲ್ಲಿ ಬಗೆಹರಿಸಬೇಕು. ಒಂದು ವೇಳೆ ಪೊಲೀಸ್ ನ್ಯಾಯಾಲಕ್ಕೆ ದಾವೆ ಹೂಡಿದರೆ ಅಂತಹವರನ್ನು ಸಮುದಾಯದ ಸಾಮಾಜಿಕ ಬಹಿಷ್ಕಾರ ಹಾಕುವುದು.
- ಶುಭಕಾರ್ಯಗಳಲ್ಲಿ ಕುಲಸ್ಥರಿಗೆ ಊಟ ಹಾಕುವುದು
- ಸೂತಕ ಮನೆಯವರು ದೇವಸ್ಥಾನ ಪ್ರವೇಶಿಸುವಂತಿಲ್ಲ
- ಸಮುದಾಯದ ಕಟ್ಟೆಮನೆ ದೇವಸ್ಥಾನದೊಳಗೆ ಕೆಳಜಾತಿಯ ಜನರು ಪ್ರವೇಶಿಸುವಂತಿಲ್ಲ
- ಬಹಿಷ್ಕಾರ ಹಾಕಿದ ವ್ಯಕ್ತಿಯ ಮನೆ ಶುಭ ಮತ್ತು ಅಶುಭ ಕಾರ್ಯಗಳಿಗೆ ಸಮುದಾಯವರು ಭಾಗವಹಿಸುವಂತಿಲ್ಲ, ಭಾಗವಹಿಸಿದರೆ ಅವರಿಗೆ ದಂಡ ವಿಧಿಸುವುದು
- ಬಹಿಷ್ಕಾರ ಹೊಂದಿದ ವ್ಯಕ್ತಿ ಕುಲಸ್ಥರಲ್ಲಿ ತಪ್ಪಿನ ಕಾಣಿಕೆ ನೀಡಿದರೆ ಅವರ ಮನೆಯ ಶುಭಕಾರ್ಯಗಳಿಗೆ ಜನರು ಭಾಗವಹಿಸುವುದು

ಹೀಗೆ ಹಲವಾರು ಸಾಮಾಜಿಕ ಕಟ್ಟುಪಾಡುಗಳು ಪರಿವಾರ ನಾಯಕ ಸಮುದಾಯದಲ್ಲಿ ಅಸ್ಥಿತ್ವದಲ್ಲಿದ್ದು, ಯಾರಾದರೂ ಈ ಕಟ್ಟುಪಾಡುಗಳನ್ನು ಉಲ್ಲಂಘಿಸಿದರೆ ದಂಡ ವಿಧಿಸಲಾಗುತ್ತದೆ.

ಪರಿವಾರ ನಾಯಕ ಸಮುದಾಯದಲ್ಲಿ ಗಡಿ ಯಜಮಾನರ ನಿರ್ಣಯ ಅಂತಿಮವಾಗಿರುತ್ತದೆ. ಕಟ್ಟೆಮನೆ ಮತ್ತು ಗುಡಿಕಟ್ಟೆಗಳನ್ನು ಸಮುದಾಯದವರು ಪವಿತ್ರವಾದ ಸ್ಥಾನವೆಂದು ಭಾವಿಸುತ್ತಾರೆ. ಯಜಮಾನನನ್ನು ದೊರೆ–ದೇವರ ಸಮಾನ ಎಂದು ನಂಬುತ್ತಾರೆ. ಯಜಮಾನನು ಸಾಮಾನ್ಯವಾಗಿ ಪ್ರಾಮಾಣಿಕ, ನೀತಿವಂತ, ಅನುಭವಸ್ಥರು ಹಾಗೂ ಗಂಭೀರ ಸ್ವಭಾವರಾಗಿದ್ದು ನಿಷ್ಪಕ್ಷಪಾತವಾಗಿ ನ್ಯಾಯ ತೀರ್ಮಾನ ಮಾಡುವವರಾಗಿದ್ದಾರೆ. ಪರಿವಾರ ನಾಯಕ ಸಮುದಾಯದ ಪಾರಂಪರಿಕ ಆದರೆ ನ್ಯಾಯಪದ್ಧತಿಯನ್ನು ಇಂದಿನ ಆಧುನಿಕ ನ್ಯಾಯಾಲಗಳಿಗೆ ಹೋಲಿಸಬಹುದಾಗಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಪರಿವಾರ ನಾಯಕ ಸಮುದಾಯದಲ್ಲಿ ಸಾಂಪ್ರದಾಯಿಕ ನ್ಯಾಯಪದ್ಧತಿಯು ಇತ್ತೀಚಿನ ದಿನಗಳಲ್ಲಿ ಸಡಿಲಗೊಳ್ಳುತ್ತಿದ್ದು, ಮೊದಲಿನಂತೆ ಬಲಿಷ್ಠವಾಗಿಲ್ಲವೆಂದೆ ಹೇಳಬಹುದು. ಪರಿವಾರ ನಾಯಕ ಸಮುದಾಯವು ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ಕುಲಪಂಚಾಯಿತಿಗೆ ಮೊದಲಿನಷ್ಟು ಪ್ರಾಮುಖ್ಯತೆ ಕಂಡು ಬರುತ್ತಿಲ್ಲ. ಗ್ರಾಮದ ಕೇರಿಗಳಲ್ಲಿ ವಾಸಿಸುತ್ತಿರುವ ಪರಿವಾರ ನಾಯಕರು ಆಧುನಿಕ ನ್ಯಾಯ ವ್ಯವಸ್ಥೆಯನ್ನು ಸ್ವೀಕರಿಸಿ ಅದಕ್ಕೆ ನಿಧಾನವಾಗಿ ಒಗ್ಗಿಕೊಳ್ಳುತ್ತಿದ್ದಾರೆ. ಗ್ರಾಮಗಳಲ್ಲಿ ಇಂದು ರಾಜಕೀಯ ಪಕ್ಷಗಳ ಪ್ರವೇಶವಾಗಿ ಸ್ಥಳೀಯ ನ್ಯಾಯ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಸ್ಥಳೀಯ ರಾಜಕೀಯ ಮುಖಂಡರು ಇವರೆಲ್ಲ ಗುಂಪುಗಾರಿಕೆಯನ್ನುಂಟುಮಾಡಿ ಅವರ ಒಗ್ಗಟ್ಟನ್ನು ಹೊಡೆಯುವಂತ ಕೆಲಸ ಮಾಡುತ್ತಿದ್ದಾರೆ. ಸಣ್ಣಪುಟ್ಟ ಜಗಳಗಳನ್ನು ಕಟ್ಟೆಮನೆಗಳಲ್ಲಿ ಬಗೆಹರಿಸಿಕೊಳ್ಳದೆ ಕೋರ್ಟ್ ಕಚೇರಿಗಳಿಗೆ ಹೋಗುವಂತಾಗಿದೆ. ಎಲ್ಲಾ ಬದಲಾವಣೆಗಳಾದರೂ ಇಂದಿಗೂ ಗ್ರಾಮದ ಹಿರಿಯರು ಕಟ್ಟೆಮನೆಗಳ ಮತ್ತು ಅವುಗಳಲ್ಲಿ ನಡೆಯುತ್ತಿದ್ದ ನ್ಯಾಯ ನಿರ್ಣಯಗಳ ಬಗ್ಗೆ ಅಪಾರ ಗೌರವ ಉಳ್ಳವರಾಗಿದ್ದಾರೆ. ನಾಯಕ ಬುಡಕಟ್ಟಿನವರಲ್ಲಿ ಇಂದಿಗೂ ಸಹ ಹಬ್ಬ ಜಾತ್ರೆ ಉತ್ಸವ ಸಂದರ್ಭದಲ್ಲಿ ಸಮುದಾಯದವರು ಆಚರಣೆ ಮಾಡುವ ದಿನಾಂಕ ಖರ್ಚುವೆಚ್ಚ ಮುಂತಾದವುಗಳನ್ನು ತೀರ್ಮಾನ ಕೈಗೊಳ್ಳುವುದು ನಡೆದುಕೊಂಡು ಬಂದಿದೆ.

**ವಕ್ತೃವಿವರ**

- ಸೋಮನಾಯಕ, ವಯಸ್ಸು–45, ಸೋಗಳ್ಳಿ ಗ್ರಾಮ.
- ಚನ್ನಪ್ಪನಾಯಕ, ವಯಸ್ಸು–56, ಇಟ್ನಾಗ್ರಾಮ.
- ಭೈರ ನಾಯಕ, ವಯಸ್ಸು–60, ಸರಗೂರು ಗ್ರಾಮ.
- ಬಸವ ನಾಯಕ, ವಯಸ್ಸು–58, ಸಾಗರ ಗ್ರಾಮ.

**ಪರಾಮರ್ಶನ ಗ್ರಂಥಗಳು**


- ಅಕ್ಕಮಹಾದೇವಿ (ಅನು.). (1984). ಬುಡಕಟ್ಟು ನ್ಯಾಯ. ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ.
- ಕೃಷ್ಣಮೂರ್ತಿ ಹನೂರು. (1993). ಮ್ಯಾಸ ಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಮೀರಾಸಾಬಿ ಶಿವಣ್ಣ. (2003). ಮ್ಯಾಸಮಂಡಲ, ಕನ್ನಡ ಪುಸ್ತಕ ಪ್ರಾಧಿಕಾರ.
- ವಿರೂಪಾಕ್ಷ ಪೂಜಾರಹಳ್ಳಿ. (2002). ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.